ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/20/ಇಸಿಎಸ್(2)/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com

ದಿನಾಂಕ:18.06.2024

## ಸುತ್ತೋಲೆ

ವಿಷಯ: ಮೇ 2024 ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಯ ಮೌಲ್ಯಮಾಪನವಾದ ಥಿಯರಿ ಉತ್ತರ ಪತ್ರಿಕೆಗಳ ಫೋಟೋ ಪ್ರತಿ ನೀಡುವುದು/ ಮರು ಮೌಲ್ಯಮಾಪನ ಮಾಡುವ ಕುರಿತು

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ 330 ಟಿಪಿಇ 2004 ದಿ: 28.6.2005
2. ದಿನಾಂಕ: 15.06.2024 ರಂದು ಜರುಗಿದ ತಾಂತ್ರಿಕ ಪರೀಕ್ಷಾ ಮಂಡಳಿಯ 189 ನೇ ಕೇಂದ್ರ ಸಭೆಯ ನಿರ್ಣಯಗಳು

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದನ್ವಯ ಮೇ 2024 ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಯ ಮೌಲ್ಯಮಾಪನವಾದ ಥಿಯರಿ ಉತ್ತರ ಪತ್ರಿಕೆಗಳ ಫೋಟೋ ಪ್ರತಿ ನೀಡಲು ಮತ್ತು ಮರು ಮೌಲ್ಯಮಾಪನ ಮಾಡಲು ನಿರ್ಧರಿಸಲಾಗಿದೆ. ವಿದ್ಯಾರ್ಥಿಗಳು/ಪೋಷಕರು ಸಂಸ್ಥೆಯ ಪ್ರಾಚಾರ್ಯರುಗಳು ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲು ಈ ಮೂಲಕ ತಿಳಿಸಲಾಗಿದೆ.

**ನಿಯಮ ಮತ್ತು ನಿಬಂಧನೆಗಳು:**

1. ಉತ್ತರ ಪತ್ರಿಕೆಗಳ ಫೋಟೋಪ್ರತಿ ಪಡೆಯಲು ಇಲ್ಲವೇ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ನಿಗಧಿಪಡಿಸಿರುವ ಅರ್ಜಿ ನಮೂನೆಯಲ್ಲಿ ಕೋರಿಕೆ ಸಲ್ಲಿಸಬೇಕು. ಅರ್ಜಿಗಳು ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳಲ್ಲಿ ಮತ್ತು ಮಂಡಳಿಯಲ್ಲಿ ಲಭ್ಯವಿರುತ್ತದೆ.
2. ಫೋಟೋಪ್ರತಿ/ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ನಿಗಧಿಪಡಿಸಿರುವ ಶುಲ್ಕವನ್ನು K2 ಮುಖಾಂತರ 0202-02-101-0-01 ಲೆಕ್ಕ ಶೀರ್ಷಿಕೆಯಲ್ಲಿ ಪಾವತಿಸಬೇಕು.
3. ಸಂಸ್ಥೆಯ ಪ್ರಾಚಾರ್ಯರು ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ವಿವರಗಳನ್ನು ಭರ್ತಿ ಮಾಡಿ, ಪ್ರಾಂಶುಪಾಲರಿಂದ ಮೇಲು ರುಜು ಮಾಡಲ್ಪಟ್ಟ ಅರ್ಜಿಗಳನ್ನು ಅಂಚೆ ಮೂಲಕವಾಗಿ ಅಥವಾ ಖುದ್ದಾಗಿ ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಅರಮನೆ ರಸ್ತೆ, ಬೆಂಗಳೂರು-560 001 ಈ ವಿಳಾಸಕ್ಕೆ ನಿಗದಿಪಡಿಸಿರುವ ಅವಧಿಯೊಳಗೆ ಸಲ್ಲಿಸಬೇಕು.

**ಉತ್ತರ ಪತ್ರಿಕೆಯ ಫೋಟೋ ಪ್ರತಿ ಬಗ್ಗೆ:**

1. ಉತ್ತರ ಪತ್ರಿಕೆಯ ಫೋಟೋ ಪ್ರತಿಗಾಗಿ ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ಅವಧಿ: **ದಿನಾಂಕ: 19.06.2024 ರಿಂದ 24.06.2024 ರವರೆಗೆ**
2. ಫೋಟೋ ಪ್ರತಿ ಶುಲ್ಕ, ಪ್ರತಿ ವಿಷಯಕ್ಕೆ ರೂ. 250-00(ಎರಡು ನೂರ ಐವತ್ತು ರೂಪಾಯಿಗಳು)
3. ಉತ್ತರ ಪತ್ರಿಕೆಗಳ ಫೋಟೋ ಪ್ರತಿಯನ್ನು ವಿದ್ಯಾರ್ಥಿಯು ವಿದ್ಯಾಭ್ಯಾಸ ಮಾಡುತ್ತಿರುವ **ಸಂಸ್ಥೆಯ ವಿಳಾಸಕ್ಕೆ ಮಾತ್ರ ಕಳುಹಿಸಲಾಗುವುದು. ವಿದ್ಯಾರ್ಥಿಯ ವೈಯಕ್ತಿಕ ವಿಳಾಸಕ್ಕೆ ಕಳುಹಿಸಲಾಗುವುದಿಲ್ಲ** ಮತ್ತು ಫೋಟೋ ಪ್ರತಿಯನ್ನು ಖುದ್ದಾಗಿ ನೀಡಲಾಗುವುದಿವಾದ್ದರಿಂದ ಈ ಬಗ್ಗೆ ಖುದ್ದಾಗಿ ಮಂಡಳಿಯಲ್ಲಿ ವಿಚಾರಿಸುವ ಅಗತ್ಯವಿರುವುದಿಲ್ಲ.
4. ಪ್ರತಿ ವಿಷಯಕ್ಕೆ ಪ್ರತ್ಯೇಕ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

**ಉತ್ತರ ಪತ್ರಿಕೆಯ ಮರು ಮೌಲ್ಯಮಾಪನದ ಬಗ್ಗೆ:**

1. ಉತ್ತರ ಪತ್ರಿಕೆಯ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ಅವಧಿ **ದಿನಾಂಕ: 19.06.2024 ರಿಂದ 24.06.2024 ರವರೆಗೆ**
2. ಮರು ಮೌಲ್ಯಮಾಪನದ ಶುಲ್ಕ, ಪ್ರತಿ ವಿಷಯಕ್ಕೆ ರೂ. 550-00(ಐದು ನೂರ ಐವತ್ತು ರೂಪಾಯಿ ಮಾತ್ರ)
3. ಪ್ರತಿ ವಿಷಯಕ್ಕೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವುದು.
4. ಮರು ಮೌಲ್ಯಮಾಪನದ ಫಲಿತಾಂಶವನ್ನು ಮರು ಮೌಲ್ಯಮಾಪನದ ನಂತರ ಸಂಬಂಧಿಸಿದ ಕಾಲೇಜುಗಳಿಗೆ ಆನ್‌ಲೈನ್‌ನಲ್ಲಿ ನಿಗದಿತ ದಿನಾಂಕದಂದು ಕಳುಹಿಸಲಾಗುವುದು ಮತ್ತು BTELinx Web Portal ನಲ್ಲಿ ಕೂಡ ಪ್ರಕಟಿಸಲಾಗುವುದು. ಅಭ್ಯರ್ಥಿಯು ತನ್ನ ಮರು ಮೌಲ್ಯಮಾಪನದ ಫಲಿತಾಂಶವನ್ನು ತನ್ನ ಕಾಲೇಜಿನಲ್ಲಿಯೇ ಪಡೆಯಲು ತಿಳಿಸಲಾಗಿದ್ದು, ಯಾವುದೇ ಕಾರಣಕ್ಕೂ ವಿದ್ಯಾರ್ಥಿಯ ವೈಯಕ್ತಿಕ ವಿಳಾಸಕ್ಕೆ ಕಳುಹಿಸಲಾಗುವುದಿಲ್ಲ.
5. ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು ಮರು ಮೌಲ್ಯಮಾಪನದ ಫಲಿತಾಂಶಕ್ಕೆ ಕಾಯದೇ ಮುಂಬರುವ ಪರೀಕ್ಷೆಗೆ ನೋಂದಾಯಿಸಿಕೊಳ್ಳಲು ನಿಗದಿತ ಶುಲ್ಕ ಪಾವತಿಸಿ, ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.
6. ಮರು ಮೌಲ್ಯಮಾಪನದ ಫಲಿತಾಂಶದ ಬಗ್ಗೆ ಮರು ಮೌಲ್ಯಮಾಪನ ಸಮಿತಿಯವರ ತೀರ್ಮಾನವೇ ಅಂತಿಮ. ಇದರ ಬಗ್ಗೆ ಮಂಡಳಿಯಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶ ಇರುವುದಿಲ್ಲ.

7. ಮರು ಮೌಲ್ಯಮಾಪನದಲ್ಲಿ ವಿದ್ಯಾರ್ಥಿಯು ಗಳಿಸಿದ ಅಂಕಗಳನ್ನು ಪರಿಗಣಿಸಿ ಫಲಿತಾಂಶವನ್ನು ನೀಡಲಾಗುವುದು. ಮುಂದುವರೆದು ಮರು ಮೌಲ್ಯಮಾಪನದಲ್ಲಿ ಗಳಿಸಿದ ಅಂಕಗಳು ಹೆಚ್ಚಾಗಿದ್ದಲ್ಲಿ ಮಾತ್ರ ಪರಿಷ್ಕೃತ ಫಲಿತಾಂಶವನ್ನು ನೀಡಲಾಗುವುದು. ಇಲ್ಲದ ಪಕ್ಷದಲ್ಲಿ ಈ ಹಿಂದೆ ಗಳಿಸಿದ ಅಂಕಗಳನ್ನು ಪರಿಗಣಿಸಲಾಗುವುದು.

**ಸೂಚನೆಗಳು :**

1) ವಿದ್ಯಾರ್ಥಿಗಳು ತಾವು ಮರುಮೌಲ್ಯಮಾಪನ/ ಫೋಟೊ ಪ್ರತಿಗಾಗಿ ಅರ್ಜಿ ಸಲ್ಲಿಸಿರುವ/ ಪ್ರಶ್ನೆಪತ್ರಿಕೆ ಕೋಡ್ ಮಾಹಿತಿಯನ್ನು ಸಂಬಂಧಪಟ್ಟ ಸಂಸ್ಥೆಯ ಪ್ರಿನ್ಸಿಪಾಲರು ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಮಂಡಳಿಗೆ ಸಲ್ಲಿಸಿರುವುದನ್ನು ಖಾತರಿಪಡಿಸಿಕೊಳ್ಳಬಹುದಾಗಿದೆ.

2) ಕೆಲವು ವಿದ್ಯಾರ್ಥಿಗಳು ಕೊನೆಯ ದಿನಾಂಕದ ನಂತರ "ಸೇವಾ ಸಿಂಧು" ಅಡಿಯಲ್ಲಿ ಅರ್ಜಿ ಸಲ್ಲಿಸುವುದು ಕಂಡು ಬಂದಿದೆ. ಆದರೆ, **ಮರುಮೌಲ್ಯಮಾಪನ/ ಫೋಟೋ ಪ್ರತಿಯನ್ನು ನಿಗದಿತ ಅವಧಿಯೊಳಗೆ ಮಾತ್ರ ನೀಡಲಾಗುತ್ತದೆ.** ಆದ ಕಾರಣ ನಿಗದಿಪಡಿಸಿರುವ ಅವಧಿಯೊಳಗೆ "ಸೇವಾ ಸಿಂಧು" ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದರೂ ಸಹ BTELinx ವೆಬ್‌ಪೋರ್ಟಲ್‌ನಲ್ಲಿ "ಸೇವಾ ಸಿಂಧು" ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ ಬಗ್ಗೆ ಮಾಹಿತಿಯನ್ನು ವಿದ್ಯಾರ್ಥಿಗಳು ಸಂಬಂಧಪಟ್ಟ ಪ್ರಿನ್ಸಿಪಾಲರು ಮತ್ತು ತಾಂತ್ರಿಕ ಪರೀಕ್ಷಾ ಮಂಡಳಿಗೆ ನೀಡತಕ್ಕದ್ದು.

3) ವಿದ್ಯಾರ್ಥಿಗಳು ಮರುಮೌಲ್ಯಮಾಪನ/ ಫೋಟೊ ಪ್ರತಿಗಾಗಿ ಈ ಸುತ್ತೋಲೆಯಲ್ಲಿ ನೀಡಲಾಗಿರುವ ಕೊನೆಯ ದಿನಾಂಕದೊಳಗೆ ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಭರ್ತಿ ಮಾಡುವುದು ಕಡ್ಡಾಯವಾಗಿರುತ್ತದೆ.

4) ಪ್ರಿನ್ಸಿಪಾಲರುಗಳು ವಿದ್ಯಾರ್ಥಿಯ ಫೋಟೋ ಪ್ರತಿಯ ಅರ್ಜಿಯನ್ನು/ಮರು ಮೌಲ್ಯಮಾಪನದ ಅರ್ಜಿಗಳನ್ನು ಪರಿಶೀಲಿಸಿ ಎಲ್ಲಾ ಅಗತ್ಯ ಮಾಹಿತಿಗಳನ್ನು (ಉದಾ: ವಿದ್ಯಾರ್ಥಿಯ ಹೆಸರು, ವಿದ್ಯಾರ್ಥಿಯ ನೋಂದಣಿ ಸಂಖ್ಯೆ, ವಿಷಯದ ಹೆಸರು, ಪ್ರಶ್ನೆ ಪತ್ರಿಕೆ ಕೋಡ್ ನಂಬರ್, ಆ ವಿಷಯದಲ್ಲಿ ಗಳಿಸಿರುವ ಅಂಕಗಳು, ಶುಲ್ಕ ಪಾವತಿಸಿರುವ ವಿವರ, ಶುಲ್ಕ ಪಾವತಿಸಿದ ಮೂಲ ಚಲನ್) ನೀಡಲಾಗಿದೆಯೇ ಎಂಬ ಬಗ್ಗೆ ಖಾತರಿ ಪಡಿಸಿಕೊಂಡು ಆನ್‌ಲೈನ್‌ನಲ್ಲಿ ಭರ್ತಿ ಮಾಡಿ Acknowledgement slip ಲಗತ್ತಿಸಿದ ಅರ್ಜಿಗಳಿಗೆ ಮಾತ್ರ ಮೇಲು ರುಜು ಮಾಡಲು ತಿಳಿಸಲಾಗಿದೆ.

5) ಪ್ರಿನ್ಸಿಪಾಲರುಗಳು ವಿದ್ಯಾರ್ಥಿಯ ಫೋಟೋ ಪ್ರತಿಯ ಅರ್ಜಿ/ಮರು ಮೌಲ್ಯಮಾಪನದ ಅರ್ಜಿಯ ವಿವರಗಳನ್ನು ಈಗಾಗಲೇ ಸಂಸ್ಥೆಗಳಲ್ಲಿ ಉಪಯೋಗಿಸುತ್ತಿರುವ ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್‌ನ ಮೂಲಕ ಆನ್ ಲೈನ್‌ನಲ್ಲಿ ಅರ್ಜಿಯ ಎಲ್ಲಾ ವಿವರಗಳನ್ನು ಭರ್ತಿ ಮಾಡಿದ ನಂತರ ಮಂಡಳಿಗೆ ಕಳುಹಿಸಿಕೊಡಲು ತಿಳಿಸಲಾಗಿದೆ. ಆನ್‌ಲೈನ್ ಮೂಲಕ ವಿವರಗಳನ್ನು ಸಲ್ಲಿಸದೇ, ನೇರವಾಗಿ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

6) ಸಂಸ್ಥೆಗಳಲ್ಲಿ ಆನ್‌ಲೈನ್ ಮೂಲಕ ಭರ್ತಿ ಮಾಡಲ್ಪಟ್ಟ ಫೋಟೋ ಪ್ರತಿಯ ಅರ್ಜಿಯನ್ನು/ಮರು ಮೌಲ್ಯಮಾಪನದ ಅರ್ಜಿಗಳನ್ನು ದಿನಾಂಕ 25.06.2024 ಸಂಜೆ 5.30 ಗಂಟೆಯೊಳಗೆ ಈ ಕಚೇರಿಗೆ ತಲುಪುವಂತೆ ಖುದ್ದಾಗಿ ಅಥವಾ ಅಂಚೆಯ ಮುಖಾಂತರ ಸಲ್ಲಿಸಲು ತಿಳಿಸಲಾಗಿದೆ. ನಂತರ ಬಂದಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಈ ವಿಷಯವನ್ನು ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತಪ್ಪದೇ ತರುವುದು.

7) ನಿಗಧಿತ ದಿನಾಂಕದ ನಂತರ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

8) ಕಾರ್ಯದರ್ಶಿಯವರ ಸೂಚನೆಗಳನ್ನು/ನಿಯಮಗಳನ್ನು ಪಾಲಿಸದ ಪ್ರಿನ್ಸಿಪಾಲರ ಮೇಲೆ ಸರ್ಕಾರದ ಆದೇಶ ಸಂಖ್ಯೆ: ಇಡಿ 57 ಟಿಪಿಇ 2013 ದಿನಾಂಕ: 17.4.2015ರ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.

9) ಪರೀಕ್ಷಾ ವಿಭಾಗಕ್ಕೆ ಸಂಬಂಧಪಟ್ಟಂತೆ ಪರೀಕ್ಷೆಯ ಎಲ್ಲಾ ರೀತಿಯ ಶುಲ್ಕಗಳನ್ನು Khajane-II (K2) ಮುಖಾಂತರವೇ ಕಡ್ಡಾಯವಾಗಿ ಪಾವತಿಸತಕ್ಕದ್ದು.

10) ಪರೀಕ್ಷಾ ಶುಲ್ಕಗಳನ್ನು ಪಾವತಿಸುವ ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರತ್ಯೇಕವಾಗಿ ಚಲನ್‌ಗಳನ್ನು ಜನರೇಟ್ ಮಾಡಿಕೊಂಡು Khajane-II ಮುಖಾಂತರವೇ ಪಾವತಿಸತಕ್ಕದ್ದು.

11) K2 ಚಲನ್ ಮುಖಾಂತರ ಪರೀಕ್ಷಾ ಶುಲ್ಕಗಳನ್ನು ಪಾವತಿಸದಿದ್ದಲ್ಲಿ ಅದರಿಂದ ಮುಂದೆ ಉಂಟಾಗುವ ಭಾದಕಗಳಿಗೆ ಸಂಬಂಧಪಟ್ಟ ಸಂಸ್ಥೆಯ ಪ್ರಿನ್ಸಿಪಾಲರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ

**ಇವರಿಗೆ,**

ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಹಾಗೂ ಸಂಸ್ಥೆಯ ವಿದ್ಯಾರ್ಥಿ ಸೂಚನಾಫಲಕದಲ್ಲಿ ಪ್ರಕಟಿಸಲು & ತರಗತಿಗಳಲ್ಲಿ ಸುತ್ತೋಲಿಸಲು

ಪ್ರತಿ: 1) ಇ– ಆಡಳಿತ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2) ಗಣಕ ಕೇಂದ್ರ – ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
3) ಕಾರ್ಯದರ್ಶಿಯವರು ಆಪ್ತ ಶಾಖೆ

ಕರ್ನಾಟಕ ಸರ್ಕಾರ

ತಾಂತ್ರಿಕ ಪರೀಕ್ಷಾ ಮಂಡಳಿ

ಡಿಪ್ಲೊಮಾ ಪರೀಕ್ಷೆಯ ಉತ್ತರ ಪತ್ರಿಕೆಗಳ ಫೋಟೋ ಪ್ರತಿಗಾಗಿಅರ್ಜಿ

# APPLICATION FOR PHOTO COPIES OF DIPLOMA ANSWER SCRIPTS

(ಅರ್ಜಿಯನ್ನು ತುಂಬುವ ಮೊದಲು ಹಿಂಬದಿಯಲ್ಲಿ ನೀಡಿರುವ ಸೂಚನೆಗಳನ್ನು ಗಮನಿಸಿ)

No. B 0081207

1. ಅಭ್ಯರ್ಥಿಯ ಹೆಸರು

2. ಪರೀಕ್ಷಾ ನೋಂದಣಿ ಸಂಖ್ಯೆ :

ಪರೀಕ್ಷಾ ವರ್ಷ ಮತ್ತು ತಿಂಗಳು :

| ವರ್ಷ | ತಿಂಗಳು |
|---|---|
| | |

(ಪ್ರವೇಶ ಪತ್ರದಲ್ಲಿ ನಮೂದಿಸಿರುವ) ಪಾಲಿಟೆಕ್ನಿಕ್ ಸಂಕೇತ ಸಂಖ್ಯೆ :

3. ಅಭ್ಯರ್ಥಿಯು ಓದಿದ ಪಾಲಿಟೆಕ್ನಿಕ್ : ______

ಹೆಸರು ಮತ್ತು ವಿಳಾಸ : ______

______

4. ಫೋಟೋ ಪ್ರತಿಗಾಗಿ ಅರ್ಜಿ ಸಲ್ಲಿಸಿರುವ ವಿಷಯದ ಹೆಸರು :

ಮೇಲಿನ ವಿಷಯದ ಪರೀಕ್ಷೆ ಪತ್ರಿಕೆಯ ಕೋಡು :

ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು :

I.A.. (ಆಂತರಿಕ ಅಂಕಗಳನ್ನು ಹೊರತುಪಡಿಸಿ)

5. ಪಾವತಿಸಿದ ಶುಲ್ಕ ಮೊತ್ತ : ರೂ. ______ ಅಕ್ಷರಗಳಲ್ಲಿ : ______

ಚಲನ್ ಸಂಖ್ಯೆ / ರಸೀದಿ ಸಂಖ್ಯೆ : ______ ದಿನಾಂಕ : ______

ಬ್ಯಾಂಕ್ / ಖಜಾನೆ ಹೆಸರು / ಪಾಲಿಟೆಕ್ನಿಕ್ ಹೆಸರು : ______

ಮೇಲೆ ನೀಡಿರುವ ಮಾಹಿತಿಗಳು ಸತ್ಯವಾಗಿದೆ ಮತ್ತು ಸರಿಯಾಗಿದೆ ಎಂದು ದೃಢೀಕರಿಸಿದೆ:

ದಿನಾಂಕ : ಪ್ರಾಚಾರ್ಯರ ಸಹಿ ಮತ್ತು ಸೀಲ್ ಅಭ್ಯರ್ಥಿಯ/ಪೋಷಕರ ಸಹಿ

- - - - - - - - - - ಇಲ್ಲಿ ಕತ್ತರಿಸಿ - - - - - - - - - -

ಸ್ವೀಕೃತಿ ಪತ್ರ

ಕ್ರ.ಸಂ.

1) ಅಭ್ಯರ್ಥಿಯ ಹೆಸರು ______

2) ನೋಂದಣಿ ಸಂಖ್ಯೆ ______ ವರ್ಷ ______ ಮೇ/ ನವೆಂಬರ್

3) ಫೋಟೋ ಪ್ರತಿಗಾಗಿ ಅರ್ಜಿ ಸಲ್ಲಿಸಿದ ವಿಷಯ

(ವಿಷಯ ಕೋಡ್) ______

4) ಶುಲ್ಕದ ವಿವರ:ಚಲನ್ ಸಂಖ್ಯೆ : ______ ದಿನಾಂಕ : ______ ರೂ. ______

ಡಿಪ್ಲೊಮಾ ಪರೀಕ್ಷಾ ಉತ್ತರ ಪತ್ರಿಕೆಯ ಫೋಟೋ ಪ್ರತಿಯ ಅರ್ಜಿಯನ್ನು ಸ್ವೀಕರಿಸಲಾಗಿದೆ.

ದಿನಾಂಕ : ಅರ್ಜಿ ಸ್ವೀಕೃತಿದಾರರ ಸಹಿ/ ಮೊಹರು

## ಸೂಚನೆಗಳು

1. ಡಿಪ್ಲೊಮಾ ಉತ್ತರ ಪತ್ರಿಕೆಗಳ ಫೋಟೋ ಪ್ರತಿ ಪಡೆಯಲು ನಿಗದಿತ ಶುಲ್ಕ ಪ್ರತಿ ವಿಷಯಕ್ಕೆ ರೂ. 250-00.
2. ಖಜಾನೆಯಲ್ಲಿ ಶುಲ್ಕ ಪಾವತಿಸಬೇಕಾದ ಲೆಕ್ಕಶೀರ್ಷಿಕೆ 0202-02-101-01 ಆಗಿದ್ದು ಅರ್ಜಿದಾರರು ನಿಗದಿತ ಶುಲ್ಕವನ್ನು ನಿಗದಿತ ಖಜಾನೆ ಚಲನ್‌ನಲ್ಲಿಯೇ ಪಾವತಿಸಬೇಕು. ಅಥವಾ ಸರ್ಕಾರಿ ಪಾಲಿಟೆಕ್ನಿಕ್ ಕಛೇರಿಯಲ್ಲಿ ಪಾವತಿಸಿದ ಚಲನ್‌ನನ್ನು/ ರಸೀದಿಯನ್ನು ಅರ್ಜಿಗೆ ಲಗತ್ತಿಸಬೇಕು. ಬ್ಯಾಂಕಿನ ಬೇಡಿಕೆ ಹುಂಡಿ ಅಥವಾ ಪೋಸ್ಟಲ್ ಆರ್ಡರ್ ಅಥವಾ ಮನಿ ಆರ್ಡರಗಳನ್ನು ಪರಿಗಣಿಸಲಾಗುವುದಿಲ್ಲ.
3. ಭರ್ತಿ ಮಾಡಿದ ಅರ್ಜಿಗಳನ್ನು ಖಜಾನೆಚಲನ್/ರಸೀದಿಯೊಂದಿಗೆ ಕೆಳಗಿನ ವಿಳಾಸಕ್ಕೆ ಅಧಿಸೂಚನೆಯಲ್ಲಿ ನಿಗದಿಪಡಿಸಿದ ದಿನಾಂಕದೊಳಗೆ ತಲುಪುವಂತೆ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಮತ್ತು ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
4. ಅರ್ಜಿದಾರರು ಉತ್ತರ ಪತ್ರಿಕೆಗಳ ಫೋಟೋ ಪ್ರತಿಗಾಗಿ ಒಂದು ವಿಷಯಕ್ಕೆ ಒಂದು ಅರ್ಜಿಯನ್ನು ಸಲ್ಲಿಸಬೇಕು.
5. ಉತ್ತರ ಪತ್ರಿಕೆಯ ಫೋಟೋ ಪ್ರತಿಯನ್ನು ವಿದ್ಯಾರ್ಥಿಯು ಓದುತ್ತಿರುವ ಪಾಲಿಟೆಕ್ನಿಕ್‌ಗೆ ಕಳುಹಿಸಲಾಗುವುದು ವಿದ್ಯಾರ್ಥಿಯ ವಿಳಾಸಕ್ಕೆ ಕಳುಹಿಸಲಾಗುವುದಿಲ್ಲ.
6. ಪರೀಕ್ಷೆಯಲ್ಲಿ ಅನುತ್ತೀರ್ಣರಾದಂತಹ ವಿದ್ಯಾರ್ಥಿಗಳು ಅಥವಾ ಉತ್ತೀರ್ಣರಾಗಿದ್ದು ಫಲಿತಾಂಶವನ್ನು ತಿರಸ್ಕರಿಸತಕ್ಕ ವಿದ್ಯಾರ್ಥಿಗಳು ಫೋಟೊ ಪ್ರತಿಗಾಗಿ ಅರ್ಜಿಯನ್ನು ಸಲ್ಲಿಸಿದ್ದರೂ ಸಹ ಫೋಟೋ ಪ್ರತಿಯು ತನ್ನ ಕೈ ಸೇರುವವರೆಗೆ ಕಾಯದೆ ಮುಂದಿನ ಪರೀಕ್ಷೆಗಾಗಿ ಅರ್ಜಿ ಮತ್ತು ಶುಲ್ಕವನ್ನು ನಿಗದಿತ ವೇಳೆಯೊಳಗೆ ಸಲ್ಲಿಸಬೇಕು.
7. ಅಭ್ಯರ್ಥಿಯು ಫೋಟೋ ಪ್ರತಿಗಾಗಿ ಅರ್ಜಿಯನ್ನು ಸಲ್ಲಿಸಲು ಅಂಕಪಟ್ಟಿ ಅಥವಾ ಅಂಕಪಟ್ಟಿ- ಅರ್ಜಿಯು ತಲುಪುವವರೆಗೆ ಕಾಯಬೇಕಾಗಿಲ್ಲ.
8. ಪರೀಕ್ಷಾ ದುರಾಚಾರಕ್ಕೆ ಒಳಗಾದ ಅಥವಾ ಫಲಿತಾಂಶವನ್ನು ತಡೆಹಿಡಿಯಲಾದಂತಹ ವಿದ್ಯಾರ್ಥಿಗಳು ಫೋಟೋ ಪ್ರತಿಗಾಗಿ ಅರ್ಜಿಯನ್ನು ಸಲ್ಲಿಸುವಂತಿಲ್ಲ.
9. ಫೋಟೋ ಪ್ರತಿಯನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಿಂದ 15 ದಿನಗಳ ನಂತರ ಅಂಚೆ ಮುಖಾಂತರ ರವಾನಿಸಲಾಗುವುದು.
10. ಫೋಟೋ ಪ್ರತಿ ಪಡೆದ ನಂತರ ಅದರಲ್ಲಿ ಅಂಕಗಳ ಎಣಿಕೆಯಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಹಾಗೂ ಯಾವುದಾದರೂ ಉತ್ತರವನ್ನು ಮೌಲ್ಯಮಾಪನ ಮಾಡದೆ ಬಿಟ್ಟಿದ್ದಲ್ಲಿ ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದೆ.
11. ಅರ್ಜಿಗಳನ್ನು ನೋಂದಣಿ ಅಂಚೆ ಮೂಲಕ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಲಕೋಟೆಯ ಮೇಲೆ ತಪ್ಪದೇ ಉತ್ತರ ಪತ್ರಿಕೆಗಳ ಫೋಟೋ ಪ್ರತಿಗಾಗಿ ಅರ್ಜಿ ಎಂದು ನಮೂದಿಸಬೇಕು.
12. ಸಂಪೂರ್ಣವಾಗಿ ಭರ್ತಿ ಮಾಡಿ ವಿದ್ಯಾರ್ಥಿ / ಪೋಷಕರ ಸಹಿ ಮಾಡಿರುವ ಅರ್ಜಿಗಳನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ಬಯಸುವವರು ಈ ಮುಂದಿನ ವಿಳಾಸಕ್ಕೆ ನಿಗದಿತ ದಿನಾಂಕದೊಳಗೆ ತಲುಪಿಸಬೇಕು.

**ಉಪನಿರ್ದೇಶಕರು (ಪರೀಕ್ಷೆ)**
**ತಾಂತ್ರಿಕ ಪರೀಕ್ಷಾ ಮಂಡಳಿ,**
**ಅರಮನೆ ರಸ್ತೆ,**
**ಬೆಂಗಳೂರು - 560 001.**

ಕರ್ನಾಟಕ ಸರ್ಕಾರ

ತಾಂತ್ರಿಕ ಪರೀಕ್ಷಾ ಮಂಡಳಿ

ಡಿಪ್ಲೊಮಾ ಪರೀಕ್ಷೆಯ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನಕ್ಕಾಗಿ ಅರ್ಜಿ

No. A 0093745

# APPLICATION FOR RE-VALUATION OF DIPLOMA ANSWER SCRIPTS

(ಅರ್ಜಿಯನ್ನು ತುಂಬುವ ಮೊದಲು ಹಿಂಬದಿಯಲ್ಲಿ ನೀಡಿರುವ ಸೂಚನೆಗಳನ್ನು ಗಮನಿಸಿ)

1. ಅಭ್ಯರ್ಥಿಯ ಹೆಸರು

2. ಪರೀಕ್ಷಾ ನೋಂದಣಿ ಸಂಖ್ಯೆ :

ಪರೀಕ್ಷಾ ವರ್ಷ ಮತ್ತು ತಿಂಗಳು :

| ವರ್ಷ | ತಿಂಗಳು |
|---|---|
| | |

(ಪ್ರವೇಶ ಪತ್ರದಲ್ಲಿ ನಮೂದಿಸಿರುವ) ಪಾಲಿಟೆಕ್ನಿಕ್ ಸಂಕೇತ ಸಂಖ್ಯೆ :

3. ಸೆಮಿಸ್ಟರ್ : ______

4. ಕೋರ್ಸು ಹೆಸರು ಮತ್ತು ಸಂಕೇತ : ______

5. ಅಭ್ಯರ್ಥಿಯು ಓದಿದ ಪಾಲಿಟೆಕ್ನಿಕ್ ಹೆಸರು ಮತ್ತು ವಿಳಾಸ : ______

6. ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಿರುವ ವಿಷಯದ ಹೆಸರು :

ಮೇಲಿನ ವಿಷಯದ ಪರೀಕ್ಷೆ ಪತ್ರಿಕೆಯ ಕೋಡು :

ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು :

(ಆಂತರಿಕ ಅಂಕಗಳನ್ನು ಹೊರತುಪಡಿಸಿ)

7. ಕಟ್ಟಿದ ಶುಲ್ಕದ ಮೊತ್ತ : ______ ರೂ. ಅಕ್ಷರಗಳಲ್ಲಿ : ______

ಚಲನ್ ಸಂಖ್ಯೆ / ರಸೀದಿ ಸಂಖ್ಯೆ : ______ ದಿನಾಂಕ : ______

ಖಜಾನೆ ಹೆಸರು / ಪಾಲಿಟೆಕ್ನಿಕ್ ಹೆಸರು ______

ಮೇಲೆ ನೀಡಿರುವ ಮಾಹಿತಿಗಳು ಸತ್ಯವಾಗಿದೆ ಮತ್ತು ಸರಿಯಾಗಿದೆ ಎಂದು ದೃಢೀಕರಿಸಿದೆ:

ದಿನಾಂಕ : ಪ್ರಾಚಾರ್ಯರ ಸಹಿ ಮತ್ತು ಸೀಲ್ ಅಭ್ಯರ್ಥಿಯ/ಪೋಷಕರ ಸಹಿ

- - - - - - - - - - ಇಲ್ಲಿ ಕತ್ತರಿಸಿ - - - - - - - - - -

ಸ್ವೀಕೃತಿ ಪತ್ರ

ಕ್ರ.ಸಂ.

1) ಅಭ್ಯರ್ಥಿಯ ಹೆಸರು ______

2) ನೋಂದಣಿ ಸಂಖ್ಯೆ ______ ವರ್ಷ ______ ಮೇ/ ನವೆಂಬರ್

3) ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಿದ ವಿಷಯ

(ವಿಷಯ ಕೋಡ್) ______

4) ಶುಲ್ಕದ ವಿವರ:ಚಲನ್ ಸಂಖ್ಯೆ : ______ ದಿನಾಂಕ : ______ ರೂ.______

ಡಿಪ್ಲೊಮಾ ಪರೀಕ್ಷಾ ಉತ್ತರ ಪತ್ರಿಕೆಯ ಮರು ಮೌಲ್ಯಮಾಪನದ ಅರ್ಜಿಯನ್ನು ಸ್ವೀಕರಿಸಲಾಗಿದೆ.

ದಿನಾಂಕ : ಅರ್ಜಿ ಸ್ವೀಕೃತಿದಾರರ ಸಹಿ/ ಮೊಹರು

## ಸೂಚನೆಗಳು

1. ಅರ್ಜಿಗಳನ್ನು ನೋಂದಣಿ ಅಂಚೆ ಮೂಲಕ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಲಕೋಟೆಯ ಮೇಲೆ ತಪ್ಪದೇ ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಎಂದು ನಮೂದಿಸಬೇಕು.
2. ಭರ್ತಿ ಮಾಡಿದ ಅರ್ಜಿಗಳನ್ನು ಖಜಾನೆ ಚಲನ್/ ರಸೀದಿಯೊಂದಿಗೆ ಕೆಳಗಿನ ವಿಳಾಸಕ್ಕೆ ಅಧಿಸೂಚನೆಯಲ್ಲಿ ನಿಗದಿಪಡಿಸಿದ ದಿನಾಂಕದೊಳಗೆ ತಲುಪಿಸಬೇಕು ನಂತರ ಬಂದ ಅರ್ಜಿಗಳನ್ನು ಮತ್ತು ಅಪೂರ್ಣ ಅರ್ಜಿಗಳನ್ನು ತಿರುಸ್ಕರಿಸಲಾಗುವುದು.
3. ಮರು ಮೌಲ್ಯಮಾಪನ ಕಾರ್ಯಕ್ಕಾಗಿ ನಿಗದಿತ ಶುಲ್ಕ ಪ್ರತಿ ವಿಷಯಕ್ಕೆ ರೂ.550-00.
4. ಅರ್ಜಿದಾರರು ಶುಲ್ಕವನ್ನು ನಿಗದಿತ ಖಜಾನೆ ಚಲನ್‌ನಲ್ಲಿಯೇ ಕಡ್ಡಾಯವಾಗಿ ಪಾವತಿಸಬೇಕು. ಅಥವಾ ಪಾಲಿಟೆಕ್ನಿಕ್‌ನಲ್ಲಿ ಪಾವತಿಸಬೇಕು ಪಾವತಿಸಿದ ಚಲನ್ ಮೂಲ ಪ್ರತಿಯನ್ನು ಅರ್ಜಿಗೆ ಲಗತ್ತಿಸಬೇಕು. ಪಾವತಿಸಬೇಕಾದ ಲೆಕ್ಕ ಶೀರ್ಷಿಕೆ 0202-02-101-0-01.
5. ಅರ್ಜಿದಾರರು ಒಂದು ವಿಷಯಕ್ಕೆ ಒಂದು ಅರ್ಜಿಯನ್ನು ಮರು ಮಾಲ್ಯಮಾಪನಕ್ಕೆ ಸಲ್ಲಿಸಬೇಕು.
6. ಮರುಮೌಲ್ಯಮಾಪನದ ಫಲಿತಾಂಶವನ್ನು ಸಂಬಂಧಿಸಿದ ಪಾಲಿಟೆಕ್ನಿಕ್‌ನಲ್ಲಿ ಪ್ರಕಟಿಸಲಾಗುವುದು. ಅಭ್ಯರ್ಥಿಯ ವಿಳಾಸಕ್ಕೆ ಕಳುಹಿಸಲಾಗುವುದಿಲ್ಲ.
7. ಪರೀಕ್ಷೆಯಲ್ಲಿ ಅನುತ್ತೀರ್ಣರಾದಂತಹ ವಿದ್ಯಾರ್ಥಿಗಳು ಅಥವಾ ಉತ್ತೀರ್ಣರಾಗಿದ್ದು ಫಲಿತಾಂಶವನ್ನು ತಿರಸ್ಕರಿಸತಕ್ಕ ವಿದ್ಯಾರ್ಥಿಗಳು ಮರು ಮೌಲ್ಯಮಾಪನಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದರೂ ಸಹ ಮರು ಮೌಲ್ಯಮಾಪನದ ಫಲಿತಾಂಶಕ್ಕಾಗಿ ಕಾಯದೆ ಮುಂದಿನ ಪರೀಕ್ಷೆಗಾಗಿ ಅರ್ಜಿ ಮತ್ತು ಶುಲ್ಕವನ್ನು ನಿಗದಿತ ಅವಧಿಯೊಳಗೆ ಸಲ್ಲಿಸಬೇಕು.
8. ಮರು ಮೌಲ್ಯಮಾಪನ ಸಮಿತಿಯ ತೀರ್ಮಾನವೇ ಅಂತಿಮ. ಈ ತೀರ್ಮಾನದ ಮೇಲೆ ಮರು ಪರಿಶೀಲನೆ ಅಥವಾ ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ.
9. ಮರು ಮೌಲ್ಯಮಾಪನದಲ್ಲಿ 06 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳು ಹೆಚ್ಚಿದಲ್ಲಿ ಮಾತ್ರ ಫಲಿತಾಂಶವನ್ನು ಪರಿಷ್ಕರಿಸಿ ಪರಿಷ್ಕೃತ ಅಂಕಪಟ್ಟಿಯನ್ನು ನೀಡಲಾಗುವುದು. ಇಲ್ಲದಿದ್ದಲ್ಲಿ ಹಿಂದಿನ ಅಂಕಗಳನ್ನೆ ಪರಿಗಣಿಸಲಾಗುವುದು.
10. ಪರೀಕ್ಷಾ ದುರಾಚಾರಕ್ಕೆ ಒಳಗಾದ ಅಥವಾ ಫಲಿತಾಂಶವನ್ನು ತಡೆಹಿಯಲಾದಂತಹ ವಿದ್ಯಾರ್ಥಿಗಳು, ಮರು ಮೌಲ್ಯಮಾಪನಕ್ಕಾಗಿ ಅರ್ಜಿಯನ್ನು ಸಲ್ಲಿಸುವಂತಿಲ್ಲ.
11. ಒಮ್ಮೆ ಮರು ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗೆ ಮತ್ತೊಮ್ಮೆ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ.
12. ಸಂಪೂರ್ಣವಾಗಿ ಭರ್ತಿ ಮಾಡಿ ವಿದ್ಯಾರ್ಥಿ/ ಪೋಷಕರ ಸಹಿ ಮಾಡಿರುವ ಅರ್ಜಿಗಳನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ಬಯಸುವವರು ಈ ಮುಂದಿನ ವಿಳಾಸಕ್ಕೆ ನಿಗದಿತ ದಿನಾಂಕದೊಳಗಾಗಿ ತಲುಪಿಸಬೇಕು.


**ಉಪನಿರ್ದೇಶಕರು (ಪರೀಕ್ಷೆ)**

**ತಾಂತ್ರಿಕ ಪರೀಕ್ಷಾ ಮಂಡಳಿ,**

**ಅರಮನೆ ರಸ್ತೆ,**

**ಬೆಂಗಳೂರು - 560 001.**